ಕೊಟ್ಟಿಲ್ಲ. ಒಬ್ಬ ಕಂಟ್ರಾಕ್ಟರ್‌ಗೆ ಒಂದು ಲಕ್ಷ ರೂಪಾಯಿ ಮಾತ್ರ ನೀವು ಕೊಟ್ಟಿದ್ದೀರಿ. ಬಾಕಿ ಉಳಿದ ಹಣವನ್ನು ಯಾರಿಗಾದರೂ ನೀವು ಕೊಟ್ಟಿದ್ದೀರಿ? ಆದರೆ ಹಣ ಬಿಡುಗಡೆ ಮಾಡಿದ್ದೇವೆ ಎಂದು ಹೇಳಿದ್ದೀರಿ. ಅದು ಬಿಡುಗಡೆಯಾಗಿಯೇ ಇಲ್ಲ. ತಪ್ಪು ಅಭಿಪ್ರಾಯವನ್ನು ನಿಮ್ಮ ಅಧಿಕಾರಿಗಳು ನಿಮಗೆ ಕೊಟ್ಟಿದ್ದಾರೆ. ತಾವು ಒಳ್ಳೆಯ ಮಂತ್ರಿಗಳು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ತಪ್ಪು ಅಭಿಪ್ರಾಯವನ್ನು ಈ ಸದನಕ್ಕೆ ಕೊಡಬಾರದು. ಆದ್ದರಿಂದ ನಾನು ಇವತ್ತು ತಮ್ಮ ಹತ್ತಿರ ಬೇಡಿಕೊಳ್ಳುವುದು ಇಷ್ಟೇ. ಅದೇನೆಂದರೆ ಇನ್ನು ಒಂದು ತಿಂಗಳಲ್ಲಿ ಅಲ್ಲಿ ಕೊಠಡಿಗಳನ್ನು ನಿರ್ಮಾಣ ಮಾಡಬೇಕು. ಇಲ್ಲದಿದ್ದರೆ ನಮಗೆ ಬೇರೆ ವ್ಯವಸ್ಥೆ ಇಲ್ಲ. ಏಕೆಂದರೆ ಹಾಸ್ಟೆಲ್‌ನಲ್ಲಿ ನಾವು ವಿದ್ಯಾಭ್ಯಾಸ ಮಾಡುತ್ತಿದ್ದೇವೆ.

ಶ್ರೀ ಬಿ.ಎ.ಮೊಹಿದ್ದೀನ್: ಈಗ ನಾವು ಕೊಟ್ಟಿರತಕ್ಕಂಥ ಫಿಗರ್ಸ್‌ನ್ನು ಅವರು ಡಿಸ್‌ಪ್ಯುಟ್ ಮಾಡುತ್ತಿದ್ದಾರೆ. ನಾನು ಇದನ್ನು ಎನ್‌ಕ್ವೈರಿ ಮಾಡಿಸಿ ಕರೆಕ್ಟ್ ಫಿಗರ್ಸ್‌ನ್ನು ಅವರಿಗೆ ಕೊಡುತ್ತೇನೆ.

ಶ್ರೀ ವಸಂತ ವಿ.ಸಾಲಿಯಾನ: ನನಗೆ ನಿಮ್ಮ ಮಾಹಿತಿ ಬೇಡ. ಕಟ್ಟಡ ಪೂರ್ಣವಾಗಬೇಕು ಅಷ್ಟೆ. ಮತ್ತೆ ಅಧ್ಯಾಪಕರನ್ನು ನೀವು ಯಾವಾಗ ಭರ್ತಿ ಮಾಡುತ್ತೀರಿ? ನಿನ್ನೆ ಸಹ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಿದ್ದೇನೆ.

ಶ್ರೀ ಬಿ.ಎ.ಮೊಹಿದ್ದೀನ್: ಆಯಿತು, ನಾನು ಹೇಳಿದ್ದೇನಲ್ಲ. ತಪ್ಪು ಮಾಹಿತಿ ಎಂದರೆ ಅದನ್ನು ನಾನು ಗಂಭೀರವಾಗಿ ಪರಿಗಣಿಸುತ್ತೇನೆ.

ಶ್ರೀ ವಸಂತ ವಿ.ಸಾಲಿಯಾನ: ಅಧ್ಯಾಪಕರ ಕೊರತೆಯನ್ನು ಯಾವಾಗ ನೀಗಿಸುತ್ತೀರಿ? ಇದಕ್ಕೆ ಏನು ತೊಂದರೆ ಇದೆ. ಬೇಕಾದರೆ ಅವರನ್ನು ಡೆಪ್ಯುಟೇಶನ್ ಮೇಲೆ ನೇಮಕ ಮಾಡಿ. ದಯವಿಟ್ಟು ಎಲ್ಲಿ ಜಾಸ್ತಿ ಇದ್ದಾರೆ ಅವರನ್ನು ನಮ್ಮ ಕಾಲೇಜಿಗೆ ಡೆಪ್ಯುಟೇಶನ್ ಮಾಡಿ.

ಶ್ರೀ ಕೆ.ಪ್ರತಾಪಚಂದ್ರಶೆಟ್ಟಿ: ಸನ್ಮಾನ್ಯ ಉಪಾಧ್ಯಕ್ಷರೇ, ಶೇಕಡಾ ಐವತ್ತು ವಿದ್ಯಾರ್ಥಿಗಳು ಇರತಕ್ಕಂಥ ಕಾಲೇಜುಗಳು ಇವೆಯೆಂಬ ಮಾತನ್ನು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇಂತಹ ಕಾಲೇಜಿನಿಂದ ಹೆಚ್ಚಿನ ಉಪನ್ಯಾಸಕರನ್ನು ಈ ಕಾಲೇಜಿಗೆ ಕಳಿಸಬಹುದು. ನಮ್ಮ ಕಾಲೇಜಿಗೆ ಆಗಲಿ, ಕಾಪು ಕಾಲೇಜಿಗೆ ಆಗಲಿ ಕಳಿಸಬಹುದಲ್ಲ?

ಶ್ರೀ ಬಿ.ಎ.ಮೊಹಿದ್ದೀನ್: ಆಯಿತು. ಟೀಚರ್ಸ್‌ನ್ನು ಕೊಡುತ್ತೇನೆ.

ಶಿಗ್ಗಾಂವ್ ಮತ್ತು ಸವಣೂರು ಆಸ್ಪತ್ರೆಗಳ ನವೀಕರಣ.

305 (2063)

ಶ್ರೀ ಕುನ್ನೂರು ಮಂಜುನಾಥ ಚೆನ್ನಪ್ಪ (ಶಿಗ್ಗಾಂವ್): ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ಶಿಗ್ಗಾಂವ್ ಮತ್ತು ಸವಣೂರು ಆಸ್ಪತ್ರೆಗಳ ನವೀಕರಣ ಕೆಲಸಕ್ಕೆ ಖರ್ಚು ಮಾಡಲಾದ ಹಣವೆಷ್ಟು?

ಆ) ಸದರಿ ಆಸ್ಪತ್ರೆಗಳ ದುರಸ್ತಿ ಕಾರ್ಯ ಮುಗಿಯಲು ಬೇಕಾಗುವ ಕಾಲಾವಧಿ ಎಷ್ಟು?

ಇ) ಸವಣೂರು ಆಸ್ಪತ್ರೆಯ ನವೀಕರಣ ಕಾಮಗಾರಿ ಕಳಪೆ ದರ್ಜೆಯಿಂದ ಕೂಡಿರುವುದು ನಿಜವೇ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಡಾ ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):

ಅ) ಶಿಗ್ಗಾಂವ್ ಮತ್ತು ಸವಣೂರು ಆಸ್ಪತ್ರೆಗಳಿಗೆ ಏಪ್ರಿಲ್ 99ರ ಅಂತ್ಯಕ್ಕೆ ಕ್ರಮವಾಗಿ ರೂ.43.22 ಮತ್ತು ರೂ.35.60 ಲಕ್ಷಗಳನ್ನು ವೆಚ್ಚ ಮಾಡಲಾಗಿದೆ.

ಆ) ಈ ಎರಡೂ ಆಸ್ಪತ್ರೆ ಕಾಮಗಾರಿಗಳಿಗೆ ಕಾಮಗಾರಿ ಪೂರ್ಣಗೊಳಿಸಲು ಗುತ್ತಿಗೆಯ 18 ತಿಂಗಳು ಕಾಲಾವಧಿ ನೀಡಲಾಗಿದೆ. ಈ ಎರಡೂ ಕಾಮಗಾರಿಗಳು ಕ್ರಮವಾಗಿ ಡಿಸೆಂಬರ್ 1999 ಮತ್ತು ಫೆಬ್ರವರಿ 2000ಕ್ಕೆ ಪೂರ್ಣಗೊಳ್ಳುತ್ತದೆ.

ಇ) ಇಲ್ಲ. ಸೂಕ್ತ ಗುಣಮಟ್ಟವನ್ನು ಕಾಪಾಡಲಾಗಿದೆ.

ಶ್ರೀ ಕುನ್ನೂರು ಮಂಜುನಾಥ ಚೆನ್ನಪ್ಪ: ಸನ್ಮಾನ್ಯ ಉಪಾಧ್ಯಕ್ಷರೇ, ಉತ್ತರದಲ್ಲಿ ಶಿಗ್ಗಾಂವ್ ಮತ್ತು ಸವಣೂರು ಆಸ್ಪತ್ರೆಗಳ ನವೀಕರಣವನ್ನು ಜರ್ಮನ್ ಸರ್ಕಾರದ ಸಹಾಯದಿಂದ ಕಟ್ಟಲಿಕ್ಕೆ ಹೊರಟಿದ್ದು ವರ್ಲ್ಡ್‌ಬ್ಯಾಂಕ್ ಸಹಾಯದಿಂದ ಕಟ್ಟುತ್ತಿದ್ದಾರೆ. ಶಿಗ್ಗಾಂವ್ ಆಸ್ಪತ್ರೆಯ ಕೆಲಸವನ್ನು ಡಿಸೆಂಬರ್ 1999ರೊಳಗೆ ಮುಗಿಸಬೇಕು ಮತ್ತು ಸವಣೂರಿನದ್ದು ಎರಡು ಸಾವಿರ ಇಸವಿಯೊಳಗೆ ಮುಗಿಸುತ್ತೇನೆ ಎನ್ನತಕ್ಕಂಥಾದ್ದನ್ನು ಅವರು ತಿಳಿಸಿದ್ದಾರೆ. ಆದರೆ ಶಿಗ್ಗಾಂವ್ ಆಸ್ಪತ್ರೆಯ ಕೆಲಸ ಕಳೆದ ಸುಮಾರು ತಿಂಗಳಿಂದ ಬಂದ್ ಆಗಿದೆ. ಈ ಕಾರಣದಿಂದ ಆದಷ್ಟು ಬೇಗ, ನಿಗದಿತ ಅವಧಿಯೊಳಗೆ ಆ ಕೆಲಸವನ್ನು ಮಾಡಬೇಕು ಎಂದು ತಮ್ಮನ್ನು ನಾನು ಕೇಳುತ್ತಿದ್ದೇನೆ. ಸವಣೂರು ಆಸ್ಪತ್ರೆ ಬಗ್ಗೆ ಅಲ್ಲಿ ತಾವು ಯಾರಿಗೆ ಗುತ್ತಿಗೆದಾರರಿಗೆ ಕೊಟ್ಟಿದ್ದೀರಿ, ಅವರು ಅದನ್ನು ಸ್ವತಃ ಮಾಡುತ್ತಿಲ್ಲ. ಅವರು ಬೇರೆಯವರಿಗೆ ವಹಿಸಿಕೊಟ್ಟಿದ್ದಾರೆ ಎಂದು ನಾನು ಕೇಳಿದ್ದೇನೆ.

ಮತ್ತೆ ಅಲ್ಲಿ ಕಾಮಗಾರಿಗಳು ಕೂಡ ಸರಿಯಾದ ಗುಣಮಟ್ಟದ ಕೆಲಸ ಮಾಡುತ್ತಿಲ್ಲ. ಆ ಕಾರಣದಿಂದ ಅಲ್ಲಿ ಕೂಡ ಆದಷ್ಟು ಬೇಗ ಆ ಕೆಲಸದ ಗುಣಮಟ್ಟವನ್ನು ಕಾಪಾಡಿಕೊಂಡು ನಿಗದಿತ ಅವಧಿಯೊಳಗೆ ಮಾಡಿ, ಈ ಎರಡೂ ಆಸ್ಪತ್ರೆಗಳನ್ನು ಮುಗಿಸಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಸಿ.ಮಹಾದೇವಪ್ಪ: ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಹೇಳಿದ ಹಾಗೆ ನಿಗದಿತ ಅವಧಿಯೊಳಗೆ ಈ ಆಸ್ಪತ್ರೆಗಳ ಕಟ್ಟಡ ಕಾಮಗಾರಿಗಳನ್ನು ಸಂಪೂರ್ಣಗೊಳಿಸಬೇಕು. ಇದರಲ್ಲಿ ಎರಡನೇ ಮಾತಿಲ್ಲ. 18 ತಿಂಗಳೊಳಗೆ ಮಾಡಬೇಕು ಎನ್ನತಕ್ಕಂಥಾದ್ದು ಒಂದು ಒಪ್ಪಂದ. ಆ ಒಪ್ಪಂದದ ಅವಧಿಯೊಳಗೇನೆ ಈ ಕಾಮಗಾರಿಗಳನ್ನು ಮುಗಿಸುವುದಕ್ಕೆ ನಾವು ಪ್ರಯತ್ನ ಮಾಡುತ್ತೇವೆ. ಇದು ಬಹುತೇಕ ನಿಗದಿತ ಸಮಯಕ್ಕೆ ಮೊದಲೇ ಕಾಮಗಾರಿಗಳು ಮುಗಿದುಹೋಗುತ್ತವೆ. ಇನ್ನು ಗುಣಮಟ್ಟದ ವಿಚಾರಕ್ಕೆ ಬಂದರೆ ನಮ್ಮ ಭಾರತ ದೇಶದಲ್ಲಿ ಮತ್ತು ಸೌತ್-ಈಸ್ಟ್ ಏಶಿಯನ್ ಕಂಟ್ರೀಸ್‌ನಲ್ಲಿ ಉತ್ತಮವಾದ ಗುಣಮಟ್ಟವನ್ನು ಕಾಪಾಡಿಕೊಳ್ಳುವುದಕ್ಕಾಗಿ ಸ್ಟಾರ್ ಸ್ಟೀಲ್ ಫೌಂಡೇಶನ್ ಆಫ್ ಇಂಡಿಯಾದಿಂದ ಡಾ: ವಿಶ್ವನಾಥ್ ಅವರ ನೇತೃತ್ವದಲ್ಲಿ ಇಡೀ ವರ್ಲ್ಡ್‌ಬ್ಯಾಂಕ್‌ನ ಕಾಮಗಾರಿಗಳ ಗುಣಮಟ್ಟವನ್ನು ಕಾಪಾಡಿಕೊಳ್ಳುವುದಕ್ಕೆ ವ್ಯವಸ್ಥೆಯಾಗಿದೆ. ಅವರು ಇದರ ನೇತೃತ್ವ ವಹಿಸಿ ಇವತ್ತು ಕೆಲಸ ಮಾಡುತ್ತಿದ್ದಾರೆ. ಅವರು ಪ್ರತಿಹಂತದಲ್ಲೂ ಕೂಡ ಗುಣಮಟ್ಟವನ್ನು ಪರೀಕ್ಷೆ ಮಾಡಿ, ಅವರಿಗೆ ಏನು ಗೈಡ್‌ಲೈನ್ಸ್ ಇದೆ ಅದರ ಪ್ರಕಾರವೇ ಮಾಡುತ್ತಾರೆ. ಸ್ವಲ್ಪ ಅನುಮಾನ ಬಂದರೂ ಕೂಡ ಅದನ್ನು ಅಲ್ಲಿಗೇ ನಿಲ್ಲಿಸಿ ಆ ತರಹ ಮುಂದುವರೆಯುವುದಕ್ಕೆ ಅವಕಾಶ ಕೊಡುವುದಿಲ್ಲ. ಕಂಟ್ರಾಕ್ಟರ್ಸ್ ಯಾರು ಎಂದು ನಾವು ತಲೆಕೆಡಿಸಿಕೊಳ್ಳುವುದಿಲ್ಲ. ಗುಣಮಟ್ಟ ಸರಿಯಾಗಿ ಇರಬೇಕು. ಈಗ ಗ್ಲೋಬಲ್ ಟೆಂಡರ್ಸ್ ಕರೆಯುತ್ತಾರೆ ಮತ್ತು ಅದರ ಮೂಲಕವೇ ಪಾರ್ಟಿಸಿಪೇಟ್ ಮಾಡುತ್ತಿದ್ದಾರೆ. ಆ ಪ್ರಕಾರವೇ ಕಾಮಗಾರಿ ನಡೆಯುತ್ತಿದ್ದು, ಗುಣಮಟ್ಟ ಉತ್ತಮವಾಗಿದೆ ಎಂದು ಹೇಳಿ ಸ್ಟಾರ್ ಸ್ಟೀಲ್ ಫೌಂಡೇಶನ್ ಅವರು ಸರ್ಟಿಫಿಕೇಟ್ ಕೊಟ್ಟಿದ್ದಾರೆ. ರಿಬೌಂಡ್ ಹ್ಯಾಮರ್ ಟೆಸ್ಟ್ ರಿಸಲ್ಟ್ ಎಂದು ಮಾಡಿ it applies to Newton's Third Law of motion ಎಷ್ಟು ಬಲದಿಂದ ಹೊಡೆಯುತ್ತೇವೆ, ಅಷ್ಟೇ ಬಲವಾಗಿ ವಾಪಸ್ಸು ಬರುತ್ತದೆ. ಅದೇನೆಂದರೆ ಸಿಮೆಂಟ್ ಒಂದು ಪರ್ಸೆಂಟ್ ಇರಬೇಕು, ಎರಡು ಪರ್ಸೆಂಟ್ ಸ್ಯಾಂಡ್ ಇರಬೇಕು ಮತ್ತು ನಾಲ್ಕು ಪರ್ಸೆಂಟ್ ಜಲ್ಲಿ ಇರಬೇಕು. ದೇಶದಲ್ಲಿ ಯಾವುದೇ ಕನ್‌ಸ್ಟ್ರಕ್ಷನ್ ಇದ್ದರೂ ಈ ಸ್ಟ್ಯಾಂಡರ್ಡ್ ಇರುತ್ತದೆ. ಈ ಸ್ಟ್ಯಾಂಡರ್ಡ್‌ನ್ನು ಅಳವಡಿಸಿಕೊಂಡೇ ಇವತ್ತು ಕಾಮಗಾರಿ ನಡೆಯುತ್ತಿದೆ. ರಿಬೌಂಡ್ ಹ್ಯಾಮರ್ ಟೆಸ್ಟ್ ಎಂದು ಏನಿದೆ, ಅದೆಲ್ಲ ಎಷ್ಟೆಷ್ಟು ಇರಬೇಕು ಎಂದು ಇದೆ. Rebound hammer test which is kept exclusively to maintain standard of any construction of the World

Bank. They are certifying. We will see that the project is completed with all time quality. I will assure that quality is maintained. Topmost importance is given.

ಶ್ರೀ ಕುನ್ನೂರು ಮಂಜುನಾಥ ಚೆನ್ನಪ್ಪ: ಮಾನ್ಯ ಸಚಿವರು ಹೇಳಿದಂತೆ ಶಿಗ್ಗಾಂವಿಯೊಳಗೆ ನಾಲ್ಕು ತಿಂಗಳಿಂದ ಕೆಲಸ ಬಂದ್ ಆಗಿದೆಯೆನ್ನತಕ್ಕಂಥಾದ್ದನ್ನು ನಾನು ಹೇಳುತ್ತಿದ್ದೇನೆ. ಆ ಕಾರಣದಿಂದ ಅವರು ನಿಗದಿತ ಅವಧಿಯೊಳಗೆ ಅಂದರೆ ಡಿಸೆಂಬರೊಳಗೆ ಮುಗಿಸಬೇಕು ಎಂದು ಇದೆ. ಕಾಮಗಾರಿ ಏಕೆ ನಿಂತುಹೋಗಿದೆ ಎನ್ನುವುದರ ಬಗ್ಗೆ ಕೂಡಲೇ ಕ್ರಮ ತೆಗೆದುಕೊಳ್ಳಬೇಕು. ಅನಂತರ ಕ್ವಾಲಿಟಿ ಬಗ್ಗೆ ಅವರು ಹೇಳಿ ಕಂಟ್ರಾಕ್ಟರ್ಸ್ ಬಗ್ಗೆ ತಲೆಕೆಡಿಸಿಕೊಳ್ಳುವುದಿಲ್ಲ ಎಂದು ಹೇಳಿದರು. ಆದರೆ ಅವರು ಕೊಡತಕ್ಕಂಥಾದ್ದು ಒಬ್ಬ ಗುತ್ತಿಗೆದಾರನಿಗೆ. ಆದರೆ ಆತ ಬಾರದೆ ಬೇರೆ ಯಾರೋ ಒಬ್ಬರು ಅಲ್ಲಿ ಕೆಲಸ ಮಾಡುತ್ತಿದ್ದಾರೆ. ನಾನು ಅವರ ಹೆಸರು ಸಹ ಕೊಡುತ್ತೇನೆ. ಯಾರೋ ಪೊಲೀಸ್ ಪಾಟೀಲ್ ಎನ್ನತಕ್ಕಂಥವರಿಗೆ ಕಂಟ್ರಾಕ್ಟ್ ಕೊಟ್ಟರೆ ಅಲ್ಲಿ ಸುರಪುರ ಎನ್ನತಕ್ಕಂಥ ಯಾರೋ ಒಬ್ಬರು ಕೆಲಸ ಮಾಡುತ್ತಿದ್ದಾರೆ. ಅಂದರೆ ಅಲ್ಲಿ ನಿಗಾವಹಿಸಿ ಸರಿಯಾದ ಕೆಲಸ ಕೂಡ ಆಗುತ್ತಿಲ್ಲ. ಅನೇಕ ಜನರು ಬಂದು ದೂರು ಕೊಟ್ಟಿದ್ದಾರೆ. ಆದ್ದರಿಂದ ಇಂಥಾದ್ದರ ಬಗ್ಗೆ ನಾನು ನಿರ್ದಿಷ್ಟವಾಗಿ ಆರೋಪ ಮಾಡುವಾಗ ತಾವು ಇದರ ಬಗ್ಗೆ ತನಿಖೆ ನಡೆಸಬೇಕು ಮತ್ತು ಕ್ರಮ ತೆಗೆದುಕೊಳ್ಳಬೇಕು. ಸುಧಾರಿಸುವ ಕೆಲಸವನ್ನು ತಾವು ಮಾಡಬೇಕು ಎಂದು ತಮ್ಮ ಮೂಲಕ ಕೇಳಿಕೊಳ್ಳುತ್ತೇನೆ.

ಡಾ: ಹೆಚ್.ಸಿ.ಮಹಾದೇವಪ್ಪ: ಕ್ವಾಲಿಟಿ ಬಗ್ಗೆ ಐಟಮ್‌ವೈಸ್ ಕ್ವಾಲಿಟಿ ಕಂಟ್ರೋಲ್ ಆಫ್ ಇಂಡಿಯಾದವರು ಸರ್ಟಿಫೈ ಮಾಡಿದ್ದಾರೆ. ವಾರ್ಡ್‌ಬ್ಲಾಕ್ ಹೇಗಿದೆ, ಟಾಯಲೆಟ್ ಬ್ಲಾಕ್ ಹೇಗಿದೆ ಎಂದು ಪ್ರತಿಯೊಂದು ವಿಚಾರದಲ್ಲೂ ಕೂಡ ಇಂಡಿವಿಜ್ಯುಯಲ್ ಆಗಿ ಸರ್ಟಿಫಿಕೇಟ್ ಕೊಟ್ಟಿದ್ದಾರೆ. ನಮ್ಮ ದೇಶದಲ್ಲಿ ಅದಕ್ಕಿಂತ ಉತ್ತಮವಾದ ಕ್ವಾಲಿಟಿ ಕಂಟ್ರೋಲ್ ಇಲ್ಲವೇ ಇಲ್ಲ ಮತ್ತು ಶಿಗ್ಗಾಂವ್ ಆಸ್ಪತ್ರೆಯಲ್ಲಿ ಕಾಮಗಾರಿ ನಿಂತಿಲ್ಲ. ನಿಗದಿತ ಅವಧಿಯಲ್ಲಿ ನಾವು ಮುಗಿಸುತ್ತೇವೆ, ಅದಕ್ಕಿಂತ ಮೊದಲೇ ಮುಗಿಸುವುದಕ್ಕೆ ಪ್ರಯತ್ನ ಮಾಡುತ್ತೇವೆ. ಕಂಟ್ರಾಕ್ಟ್ ಏನು ತೆಗೆದುಕೊಂಡಿದ್ದಾರೆ ಅವರ ಏಜೆಂಟ್‌ನೋ ಅಥವಾ ಅವರ ಪರವಾಗಿರುವಂಥ ಇಂಜಿನಿಯರ್ಸ್ ಯಾರೋ ಕೆಲಸ ನೋಡಿಕೊಂಡರೆ ಅದು ಅವರಿಗೆ ಬಿಟ್ಟಿದ್ದು. ನಮಗೆ ಬೇಕಾಗಿರುವುದು ಕ್ವಾಲಿಟಿ. ನಮ್ಮದೇ ಕೆ.ಹೆಚ್.ಎಸ್.ಡಿ.ಪಿ.ಯಿಂದ ಇಂಜಿನಿಯರುಗಳು ಇದ್ದಾರೆ. ಅವರೆಲ್ಲರೂ ಹೆಜ್ಜೆಹೆಜ್ಜೆಗೂ ಕಣ್ಣಿಟ್ಟು ನೋಡುತ್ತಾರೆ. ಕ್ವಾಲಿಟಿ ವಿಚಾರದಲ್ಲಿ ರಾಜಿ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ನಿಗದಿತ ಅವಧಿಯೊಳಗೆ ನಾವು ಮುಗಿಸುತ್ತೇವೆ. ಆ ಕಾಮಗಾರಿಗಳು ಕೂಡ ನಿಂತಿಲ್ಲವೆಂದು ಹೇಳಿ ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ನಾನು ಆಶ್ವಾಸನೆ ಕೊಡುವುದಕ್ಕೆ ಬಯಸುತ್ತೇನೆ.